# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:13.05.2025

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007**

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/743/2025–26/** 693 **ದಿನಾಂಕ:17.05.2025**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:13.05.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:13.05.2025 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

<u>ಪ್ರತಿಗಳು:</u>

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:13.05.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

<u>ಸಭೆಯಲ್ಲಿ ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು | : ಅಧ್ಯಕ್ಷರು |
| 2. | ಪ್ರೊ. ಶಶಿಧರ ಆರ್. ಡೀನರು, ವಾಣಿಜ್ಯ ನಿಕಾಯ | : ಸದಸ್ಯರು |
| 3. | ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 4. | ಡಾ. ಉಮೇಶ್ ಬಿ. ಎನ್., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 5. | ಡಾ. ಕೆ.ಟಿ. ನಾಗರಾಜ ನಾಯ್ಕ., ಪ್ರಾಚಾರ್ಯರು | : ಸದಸ್ಯರು |
| 6. | ಡಾ. ಬಾಬು ಕುಮಾರ್ ಓ., ಪ್ರಾಚಾರ್ಯರು | : ಸದಸ್ಯರು |
| 7. | ಡಾ. ಗಿರೀಶ್ ಟಿ., ಪ್ರಾಚಾರ್ಯರು | : ಸದಸ್ಯರು |
| 8. | ಶ್ರೀಮತಿ ಉಷಾ ಎಸ್., ಆರ್, ಪ್ರಾಚಾರ್ಯರು | : ಸದಸ್ಯರು |
| 9. | ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 10. | ಡಾ. ಜಿ. ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 11. | ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 12. | ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 13. | ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 14. | ಪ್ರೊ. ರವಿಕುಮಾರ್ ಪಾಟೀಲ್ ಹೆಚ್.ಎಸ್., ಪ್ರಾಧ್ಯಾಪಕರು | : ಸದಸ್ಯರು |
| 15. | ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) | : ಸದಸ್ಯರು |
| 16. | ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು, (ಆಡಳಿತ) | : ಸದಸ್ಯ ಕಾರ್ಯದರ್ಶಿ |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 16 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಮಾನ್ಯ ಕುಲಪತಿಗಳು ಹೊಸದಾಗಿ ಆಗಮಿಸಿರುವ ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್. (ಆಯ್ಕೆ ಶ್ರೇಣಿ) ಕುಲಸಚಿವರು, ಆಡಳಿತ ಇವರನ್ನು ಅಭಿನಂದಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು | ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(05/25) |

## –:ಟಿಪ್ಪಣಿ:–

**ವಿಷಯ: ದಿನಾಂಕ:18.03.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:18.03.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:01.04.2025 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:18.03.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಕುರಿತು ಕ್ರಮವಹಿಸಿರುವುದರ ಸಂಪೂರ್ಣ (Action Taken Report) ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ಮುಂದುವರೆದು, ಸದರಿ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(05/25) |

**–:ಟಿಪ್ಪಣಿ:–**

**ವಿಷಯ: ದಿನಾಂಕ:01.04.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:01.04.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:04.04.2025 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:01.04.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳ ಕುರಿತು ಕ್ರಮವಹಿಸಿರುವುದರ ಸಂಪೂರ್ಣ (Action Taken Report) ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ಮುಂದುವರೆದು, ಸದರಿ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.01(c)/(05/25) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಸದಸ್ಯರನ್ನು ಹಣಕಾಸು ಸಮಿತಿ ಸಭೆಗೆ ನಾಮನಿರ್ದೇಶನ ಮಾಡಿರುವ ಕುರಿತು.**

*****

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 32 (1) (V) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ **ಶ್ರೀ ಪ್ರಶಾಂತ್ ಆರ್.ಟಿ** .– ಇವರನ್ನು ದಿನಾಂಕ:20.03.2025 ರಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:13.05.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :ನಿರ್ಣಯ:

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ **ಶ್ರೀ ಪ್ರಶಾಂತ್ ಆರ್.ಟಿ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ** – ಇವರನ್ನು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(a)/(05/25) |

## –: ಟಿಪ್ಪಣಿ :–

**ವಿಷಯ:** **2025–26ನೇ ಸಾಲಿಗೆ ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಟೆಂಡರ್ ಕರೆಯುವ/ ಮುಂದುವರೆಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:16.04.2025

*********

ವಿಶ್ವವಿದ್ಯಾನಿಲಯಕ್ಕೆ 2024–25ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ 'ಸಿ' ಮತ್ತು 'ಡಿ' ದರ್ಜೆ ನೌಕರರ ಸೇವೆ ಪಡೆಯಲು ಟೆಂಡರ್ ಆದೇಶವನ್ನು ಮೆ॥ ಬಿ.ಕೆ.ಆರ್. ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಲಾಗಿತ್ತು. ಅದರಂತೆ ಸದರಿಯವರ ಸೇವೆಯ ಅವಧಿಯು ಮಾರ್ಚ್–2025ಕ್ಕೆ ಮುಕ್ತಾಯವಾಗಿರುತ್ತದೆ. ಆದರೆ, ಈ ಸಮಯದಲ್ಲಿ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಇದ್ದುದರಿಂದ ಟೆಂಡರ್ ಕರೆಯಲಾಗಿರಲಿಲ್ಲ ಹಾಗೂ ಉಲ್ಲೇಖ (1) ರ ಮಾನ್ಯ ಕುಲಪತಿಗಳ ಆದೇಶಾನುಸಾರ ಮೆ॥ ಬಿ.ಕೆ.ಆರ್. ಪ್ರೈವೇಟ್ ಲಿಮಿಟೆಡ್, ಬೆಂಗಳೂರು – ಇವರನ್ನು ತಾತ್ಕಾಲಿಕವಾಗಿ ಟೆಂಡರ್ ಕರೆಯುವವರೆಗೆ 03 ತಿಂಗಳ ಅವದಿಗೆ ಮಾನವ ಸಂಪನ್ಮೂಲ ಸೇವೆಯನ್ನು ಮುಂದುವರೆಸಲಾಗಿತ್ತು.

ತತ್ಸಂಬಂಧ, 2025–26ನೇ ಸಾಲಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಹ ಸಂಸ್ಥೆಯವರು ಭಾಗವಹಿಸಲು ಇ–ಟೆಂಡರ್ ಕರೆಯಬೇಕಾಗಿರುವುದರಿಂದ ಟೆಂಡರ್ ಕರೆದು ಪ್ರಕ್ರಿಯೆ ನಡೆಸುವ/ ಮುಂದುವರೆಸುವ ಬಗ್ಗೆ ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯಕ್ಕೆ 2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ.ಮೇಲೆ 'ಸಿ' ಮತ್ತು 'ಡಿ' ದರ್ಜೆ ನೌಕರರ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಹ ಸಂಸ್ಥೆಗಳಿಂದ ನಿಯಮಾನುಸಾರ ಇ–ಟೆಂಡರ್ ಕರೆಯಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(05/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ಕಛೇರಿಗೆ 5 ಟೇಬಲ್ ಹಾಗೂ ಪುರುಷರ ವಿದ್ಯಾರ್ಥಿ ನಿಲಯಕ್ಕೆ 30 ಊಟದ ಬೆಂಚ್‌ಗಳನ್ನು ಖರೀದಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ವಿದ್ಯಾರ್ಥಿ ನಿಲಯಪಾಲಕರ ಮನವಿ ದಿನಾಂಕ:26.11.2025

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿರುವ ಪುರುಷರ ವಿದ್ಯಾರ್ಥಿ ನಿಲಯದಲ್ಲಿ ಪುರುಷ ನಿಲಯದ ವಿದ್ಯಾರ್ಥಿಗಳು ಕುಳಿತು ಊಟ ಮಾಡಲು ಆಗುತ್ತಿಲ್ಲ, ನಿಂತುಕೊಂಡು ಊಟ ಮಾಡುತ್ತಿದ್ದೇವೆಂದು ವಿದ್ಯಾರ್ಥಿಗಳು ದೂರು ನೀಡುತ್ತಿರುವುದರಿಂದ ತುರ್ತಾಗಿ 30 ಬೆಂಚುಗಳನ್ನು ಒದಗಿಸುವಂತೆ ನಿಲಯಪಾಲಕರು ಉಲ್ಲೇಖ (1) ರಲ್ಲಿ ಮನವಿ ಸಲ್ಲಿಸಿರುತ್ತಾರೆ. ಹಾಗೂ ಕಛೇರಿಗೆ 05 ಟೇಬಲ್‌ಗಳು ತುರ್ತಾಗಿ ಬೇಕಾಗಿದ್ದರಿಂದ ಈಗಾಗಲೇ ಟೆಂಡರ್ ಕರೆದು ಪಿಠೋಪಕರಣ ಖರೀದಿಗಾಗಿ ದರ ಒಪ್ಪಂದ ಮಾಡಿಕೊಂಡಿರುವ ಮೆ॥ ನಂದಿ ಟೆಕ್ನಾಲಜಿ, ದಾವಣಗೆರೆ ಇವರಿಂದ ಪೀಠೋಪಕರಣಗಳನ್ನು ಖರೀದಿಸಿರುವ ಕುರಿತು ಈ ವಿಷಯವನ್ನು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪುರುಷರ ವಿದ್ಯಾರ್ಥಿ ನಿಲಯಕ್ಕೆ 30 ಊಟದ ಬೆಂಚುಗಳನ್ನು ಹಾಗೂ ವಿಶ್ವವಿದ್ಯಾನಿಲಯದ ಕಛೇರಿಗೆ 05 ಟೇಬಲ್‌ಗಳನ್ನು ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಮೆ॥ ನಂದಿ ಟೆಕ್ನಾಲಜಿ, ದಾವಣಗೆರೆ ಇವರಿಂದ ನಿಯಮಾನುಸಾರ ಪೀಠೋಪಕರಣಗಳನ್ನು ಖರೀದಿಸಿರುವುದನ್ನು ಸಭೆಯು ಒಮ್ಮದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 6 | |
| --- | --- |
| ವಿಷಯ ಸಂಖ್ಯೆ: | ಸಿಂ.02(c)/(05/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತುರುವನೂರು ಇಲ್ಲಿಗೆ ಅಗತ್ಯ ಪೀಠೋಪಕರಣಗಳನ್ನು ಖರೀದಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ತುರುವನೂರು ಇಲ್ಲಿ ನೂತನವಾಗಿ ನಿರ್ಮಾಣವಾಗಿರುವ ಕಟ್ಟಡಕ್ಕೆ ಶೈಕ್ಷಣಿಕ ಚಟುವಟಿಗಳಿಗೆ ಅಗತ್ಯವಾಗಿರುವ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವಂತೆ ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು ಇವರು ಕೋರಿರುವುದರಿಂದ ಸದರಿ ಪೀಠೋಪಕರಣಗಳನ್ನು ದರಪಟ್ಟಿ/ ಇ-ಟೆಂಡರ್ ಆಧಾರದ ಮೇಲೆ ಖರೀದಿಸುವ ಕುರಿತು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ. | ಪೀಠೋಪಣಗಳ ವಿವರ | ಪ್ರಮಾಣ |
| --- | --- | --- |
| 1. | ಡೆಸ್ಕ್‌ಗಳು (3) | 60 |
| 2. | ಡಯಾಸ್‌ಗಳು | 10 |
| 3. | ಕಛೇರಿ ಟೇಬಲ್‌ಗಳು | 20 |
| 4. | ಕುರ್ಚಿಗಳು | 30 |
| 5. | ನೋಟೀಸ್ ಬೋರ್ಡ್ | 03 |
| 6. | ಕಂಪ್ಯೂಟರ್ ಟೇಬಲ್ | 15 |
| 7. | ಕಂಪ್ಯೂಟರ್ ಚೇರ್ಸ್ | 15 |
| 8. | ಕಂಪ್ಯೂಟರ್‌ಗಳಿಗೆ ವೈರಿಂಗ್ & ಯು.ಪಿ.ಎಸ್. ಬ್ಯಾಟರಿ | |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ತುರುವನೂರು ಇಲ್ಲಿ ನೂತನವಾಗಿ ನಿರ್ಮಾಣ ವಾಗಿರುವ ಕಟ್ಟಡಕ್ಕೆ ಶೈಕ್ಷಣಿಕ ಚುಟುವಟಿಗಳಿಗೆ ಅಗತ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಪಟ್ಟಿಯಲ್ಲಿನ ಕ್ರಮ ಸಂಖ್ಯೆ: 01 ರಿಂದ 05 ರವರೆಗಿನ ಪೀಠೋಪಕರಣಗಳನ್ನು ಮೆ॥ ನಂದಿ ಟೆಕ್ನಾಲಜಿ, ದಾವಣಗೆರೆ ಇವರಿಂದ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮದಿಂದ ಅನುಮೋದಿಸಿತು.

ಕುಲಸಚಿವರು　　　　ಕುಲಪತಿಗಳು

| ಅಭಿವೃದ್ಧಿ ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(05/25) |

## –:ಟಿಪ್ಪಣಿ:–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಕಂಪ್ಯೂಟರ್ ಲ್ಯಾಬ್ (Computer Lab) ನ ನಿರ್ಮಾಣ ಮಾಡುವ ಕುರಿತು.

*****

ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು – ದಿನಾಂಕ:05.05.2025 ರ ಪತ್ರದಲ್ಲಿ ತಮ್ಮ ವಿಭಾಗವು 1979ರಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಶ್ರಮಿಸುತ್ತಿದ್ದೇವೆ. 2021–22ನೇ ಸಾಲಿನಿಂದ Computer Skill Based ಕೋರ್ಸ್‌ಗಳನ್ನು ಪ್ರಾರಂಭಿಸಿರುತ್ತೇವೆ. ಆದರೆ, ಇದುವರೆಗೂ ವಿಭಾಗವು ತನ್ನದೇ ಆದ ಕಂಪ್ಯೂಟರ್ ಲ್ಯಾಬ್‌ಗಳನ್ನು ಹೊಂದಿರುವುದಿಲ್ಲ. ಆದಾಗ್ಯೂ ವಿಶ್ವವಿದ್ಯಾನಿಲಯದ ಸಾಮಾನ್ಯ ಕಂಪ್ಯೂಟರ್ ಮತ್ತು ಭಾಷಾ ಪ್ರಯೋಗಾಲಯವನ್ನು ಬಳಸಿಕೊಂಡು ತರಗತಿಗಳನ್ನು ನಡೆಸಲಾಗುತ್ತಿದೆ.

2024–25 ಸಾಲಿನ ಪಠ್ಯಕ್ರಮದಲ್ಲಿ ಹಲವಾರು ಕಂಪ್ಯೂಟರ್ ಆಧಾರಿತ ಕೋರ್ಸ್‌ಗಳನ್ನು ಒಳಗೊಂಡಿರುವುದರಿಂದ ತರಬೇತಿಯ ಅವಶ್ಯಕತೆಯಿರುತ್ತದೆ. ಜೊತೆಗೆ ಈ ಕೆಳಕಂಡ ಪೀಠೋಪಕರಣ/ ಯಂತೋಪಕರಣಗಳನ್ನು ಖರೀದಿಸಿ ಕಂಪ್ಯೂಟರ್ ಲ್ಯಾಬ್‌ನ್ನು ವಾಣಿಜ್ಯಶಾಸ್ತ್ರ ವಿಭಾಗಕ್ಕೆ ಅಳವಡಿಸುವಂತೆ ಕೋರಿರುತ್ತಾರೆ. ಸದರಿ ನಿರ್ಮಾಣಕ್ಕೆ ಅಂದಾಜು ಮೊತ್ತ ರೂ. 80.00 ಲಕ್ಷ ಆಗಲಿದ್ದು E-Tender ಮುಖಾಂತರ ಕೈಗೊಳ್ಳಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

| Sl.No | Items |
|---|---|
| 1 | 60 Computers with the latest configrrations |
| 2 | UPS backup system |
| 3 | Air Conditioning unites |
| 4 | A projector with screen |
| 5 | A whiteboard |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಂಪ್ಯೂಟರ್ ಲ್ಯಾಬ್‌ನ್ನು ಪ್ರಸ್ತುತವಿರುವ ಸದರಿ ವಿಭಾಗದ ಕೊಠಡಿಯೊಳಗೆ ಸ್ಥಾಪಿಸಲು ಈ ಮೇಲ್ಕಂಡ ಪಟ್ಟಿಯಲ್ಲಿನ ಪೀಠೋಪಕರಣ ಹಾಗೂ ಯಂತ್ರೋಪಕರಣಗಳ ಅಂದಾಜು ಮೊತ್ತ ರೂ.80.00 ಲಕ್ಷ ಮಿತಿಯೊಳಗೆ E-Tender ಮುಖಾಂತರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಸಂಶೋಧನಾ & ಅಭಿವೃದ್ಧಿ ಕೋಶ-8 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(05/25) |

## -ಃ ಟಿಪ್ಪಣಿ ಃ-

**ವಿಷಯಃ 2024-25ನೇ ಶೈಕ್ಷಣಿಕ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಯ ಶುಲ್ಕ ಪರಿಷ್ಕರಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಖಾಲಿ ಇರುವ ಪಿಹೆಚ್.ಡಿ ಸಂಶೋಧನಾ ರಿಕ್ತ ಸ್ಥಾನಗಳಿಗೆ ಪ್ರವೇಶಾತಿ ನೀಡುವ ಕುರಿತು ಅರ್ಜಿ ಆಹ್ವಾನಿಸಲಾಗಿರುವ ಹಿನ್ನೆಲೆಯಲ್ಲಿ 2024-25ನೇ ಸಾಲಿಗೆ ಪಿಹೆಚ್.ಡಿ ಶುಲ್ಕವನ್ನು ಪರಿಷ್ಕರಿಸುವ ಕುರಿತು ಚರ್ಚಿಸಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪಿಹೆಚ್.ಡಿ ಪ್ರವೇಶಾತಿಗೆ ಸಂಬಂಧಿಸಿದಂತೆ, 2024-25ನೇ ಶೈಕ್ಷಣಿಕ ಸಾಲಿಗೆ ಹಾಗೂ ಮುಂದೆ ಪ್ರತಿ ಎರಡು ವರ್ಷಕ್ಕೊಮ್ಮೆ ಶೇಕಡ 10% ರಷ್ಟು ಹೆಚ್ಚಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(05/25) |

## –ः ಟಿಪ್ಪಣಿ ः–

**ವಿಷಯಃ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ 03 ಅಧ್ಯಾಪಕರ ವಸತಿ ಗೃಹ ಕೊಠಡಿಗಳನ್ನು ಶಾಸನಬದ್ಧ ಅಧಿಕಾರಿಗಳಿಗೆ ಮೀಸಲಿರಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿ ಪ್ರಸುತ್ತ ಮಾನ್ಯ ಕುಲಪತಿಗಳಿಗೆ ವಸತಿ ಗೃಹ ಇರುತ್ತದೆ. ಆದರೆ, ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಸಚಿವರು(ಆಡಳಿತ), ಕುಲಸಚಿವರು(ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು ಹಾಗೂ ಕಾರ್ಯಪಾಲಕ ಅಭಿಯಂತರರು ಇವರಿಗೆ ವಸತಿ ಗೃಹಗಳು ಇಲ್ಲದೇ ಇರುವುದರಿಂದ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ 03 ಸಂಖ್ಯೆ ಅಧ್ಯಾಪಕರ ವಸತಿ ಗೃಹಗಳನ್ನು ಮೇಲ್ಕಾಣಿಸಿದ ಶಾಸನಬದ್ಧ ಅಧಿಕಾರಿಗಳಿಗೆ ಮೀಸಲಿಡಲು ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು ಅಧ್ಯಾಪಕರುಗಳಿಗೆ ವಸತಿ ಗೃಹಗಳನ್ನು ನೀಡುವ ಕುರಿತು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**:ಷರತ್ತುಗಳು:**

1. ವಸತಿ ಗೃಹಗಳಲ್ಲಿ ವಾಸಿಸಲು ಪ್ರಥಮ ಆಧ್ಯತೆಯನ್ನು ಶಾಸನಬದ್ಧ ಅಧಿಕಾರಿಗಳಿಗೆ ನೀಡುವುದು.
2. ಶಾಸನಬದ್ಧ ಅಧಿಕಾರಿಗಳು ವಸತಿ ಗೃಹದಲ್ಲಿ ಇರಲು ಇಚ್ಛಿಸಿದ್ದಲ್ಲಿ ಪ್ರಸ್ತುತ ಇರುವ ಅಧ್ಯಾಪಕರು ವಸತಿ ಗೃಹವನ್ನು 01 ತಿಂಗಳ ಒಳಗಾಗಿ ತೆರವುಗೊಳಿಸಬೇಕು.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಸಚಿವರು(ಆಡಳಿತ), ಕುಲಸಚಿವರು(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು ಹಾಗೂ ಕಾರ್ಯಪಾಲಕ ಅಭಿಯಂತರರು ಇವರಿಗೆ ಶಿವಗಂಗೋತ್ರಿ ಆವರಣದಲ್ಲಿನ ಅಧ್ಯಾಪಕರ ವಸತಿ ಗೃಹಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಮೀಸಲಿಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಮುಂದುವರೆದು, ಈ ಮೇಲ್ಕಂಡ ಶಾಸನಬದ್ಧ ಅಧಿಕಾರಿಗಳು ವಸತಿ ಗೃಹಗಳಲ್ಲಿ ವಾಸಿಸದಿದ್ದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಜೇಷ್ಠತೆಯನುಸಾರ ವಸತಿ ಗೃಹಗಳನ್ನು ಈ ಮೇಲ್ಕಂಡ ಷರತ್ತಿಗೊಳಪಟ್ಟು ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಅನುಮೋದಿಸಿತು

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.04(b)/(05/25) |

## –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ MBA ಕಟ್ಟಡದಲ್ಲಿರುವ Auditorium ನಲ್ಲಿ ಹೊಸದಾಗಿ ವಿದ್ಯುತ್ ವ್ಯವಸ್ಥೆ ಮಾಡಿಸಿರುವ ಕುರಿತು.**

*********

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium ನಲ್ಲಿ ಸಂಪೂರ್ಣವಾಗಿ ವಿದ್ಯುತ್ ವ್ಯವಸ್ಥೆ ಹಾಳಾಗಿದ್ದು ಹೊಸದಾಗಿ ಮತ್ತು ವಿದ್ಯುತ್ ಸಾಮಗ್ರಿಗಳನ್ನು ಅಳವಡಿಸುವ ಅವಶ್ಯಕತೆ ಇದ್ದಿದ್ದರಿಂದ ತುರ್ತಾಗಿ ದರಪಟ್ಟಿ ಆಧಾರದ ಮೇಲೆ ಕೈಗೊಂಡಿದ್ದು ಅದರ ಬಾಬ್ತು ರೂ.4,86,000.00 ಗಳನ್ನು ಸಂಬಂಧಪಟ್ಟವರಿಗೆ ಪಾವತಿಸಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium ಗೆ ಹೊಸದಾಗಿ ವಿದ್ಯುತ್ ಸಾಮಗ್ರಿಗಳನ್ನು ದರಪಟ್ಟಿ ಆಧಾರದ ಮೇಲೆ ಕಾಮಗಾರಿ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಅದರ ಬಾಬ್ತು ರೂ.4,86,000.00 ಗಳನ್ನು ಸಂಬಂಧಪಟ್ಟವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.04(c)/(05/25) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ MBA ಕಟ್ಟಡದಲ್ಲಿರುವ Auditorium ಗೆ ಹೊಸದಾಗಿ Teakwood Door Frame ಮತ್ತು ಬಾಗಿಲುಗಳನ್ನು ಸರಬರಾಜು ಮಾಡಿರುವ ಕುರಿತು.**

*********

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium ನ ಮುಖ್ಯದ್ವಾರದ ಎರಡು ಬಾಗಿಲುಗಳು ಸಂಪೂರ್ಣ ಹಾಳಾಗಿದ್ದು ಅವುಗಳನ್ನು ಬದಲಿಸಿ ಹೊಸದಾಗಿ Teakwood Door Frame ಮತ್ತು ಬಾಗಿಲುಗಳನ್ನು ತುರ್ತಾಗಿ ದರಪಟ್ಟಿ ಆಧಾರದ ಮೇಲೆ ಕೈಗೊಂಡಿದ್ದು ಅದರ ಬಾಬ್ತು ರೂ.3,30,000.00 ಗಳನ್ನು ಸಂಬಂಧಪಟ್ಟವರಿಗೆ ಪಾವತಿಸಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium ನ ಮುಖ್ಯದ್ವಾರದ ಎರಡು Teakwood Door Frame ಮತ್ತು ಬಾಗಿಲುಗಳನ್ನು ಹೊಸದಾಗಿ ದರಪಟ್ಟಿ ಆಧಾರದ ಮೇಲೆ ಖರೀದಿಸಿರುವುದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಅದರ ಬಾಬ್ತು ರೂ.3,30,000.00ಗಳನ್ನು ಸಂಬಂಧಪಟ್ಟವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು                                                            ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.04(d)/(05/25) |

## –ಃ ಟಿಪ್ಪಣಿ ಃ–

**ವಿಷಯಃ ದೃಶ್ಯಕಲಾ ಮಹಾವಿದ್ಯಾಲಯದ ಕಲಾ ಗ್ಯಾಲರಿಗೆ ಬಣ್ಣ, ದೀಪದ (Lights) ವ್ಯವಸ್ಥೆ, ಕಲಾಕೃತಿಗಳಿಗೆ ಫ್ರೇಮ್ ಮತ್ತು ಮೌಂಟಿಂಗ್ ಮಾಡಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯವು ವಜ್ರಮಹೋತ್ಸವ ಸಂಭ್ರಮಾಚರಣೆಯಲ್ಲಿ ಇರುವುದರಿಂದ ಈ ಮಹಾವಿದ್ಯಾಲಯದಲ್ಲಿರುವ ಕಲಾ ಗ್ಯಾಲರಿಗೆ ಬಣ್ಣ, ದೀಪದ (Lights) ವ್ಯವಸ್ಥೆ, ಕಲಾಕೃತಿಗಳಿಗೆ ಫ್ರೇಮ್ ಮತ್ತು ಮೌಂಟಿಂಗ್ ಕಾಮಗಾರಿಯನ್ನು ದರಪಟ್ಟಿ ಆದಾರದ ಮೇಲೆ ಅಂದಾಜು ಮೊತ್ತ ರೂ.5.00 ಲಕ್ಷದ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯವು ವಜ್ರಮಹೋತ್ಸವ ಸಂಭ್ರಮಾಚರಣೆಯಲ್ಲಿ ಇರುವುದರಿಂದ ಈ ಮಹಾವಿದ್ಯಾಲಯದಲ್ಲಿರುವ ಕಲಾ ಗ್ಯಾಲರಿಗೆ ಬಣ್ಣ, ದೀಪದ (Lights) ವ್ಯವಸ್ಥೆ, ಕಲಾಕೃತಿಗಳಿಗೆ ಫ್ರೇಮ್ ಮತ್ತು ಮೌಂಟಿಂಗ್ ಕಾಮಗಾರಿಯನ್ನು ದರಪಟ್ಟಿ ಆದಾರದ ಮೇಲೆ ಅಂದಾಜು ಮೊತ್ತ ರೂ.5.00 ಲಕ್ಷದ ಮಿತಿಯೊಳಗೆ ದಿನಾಂಕ:30.05.2025 ರೊಳಗೆ ತುರ್ತಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸಭೆಯು ನಿರ್ಣಯಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.04(e)/(05/25) |

## –:ಟಿಪ್ಪಣಿ:–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ **Modular Lab** ನಿರ್ಮಾಣ ಮಾಡುವ ಕುರಿತು.

*****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಯೋಗಾಲಯಗಳನ್ನು ಕೈಗೊಳ್ಳಲು Modular Lab ನಿರ್ಮಾಣ ಮಾಡಿಸಿಕೊಡುವಂತೆ ಸಂಯೋಜನಾಧಿಕಾರಿಗಳು, ಅಪರಾಧಶಾಸ್ತ್ರ ಅಧ್ಯಯನ ವಿಭಾಗ ಇವರು ಕೋರಿರುತ್ತಾರೆ. ಆದ್ದರಿಂದ ಅಪರಾದಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಯೋಗಾಲಯಗಳನ್ನು ಕೈಗೊಳ್ಳಲು Modular Lab ನಿರ್ಮಾಣ ಮಾಡಿಸಿಕೊಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:13.05.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅಪರಾಧಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳು ಪ್ರಯೋಗಾಲಯಗಳನ್ನು ಕೈಗೊಳ್ಳಲು Modular Lab ನಿರ್ಮಾಣದ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ 15 ದಿನಗಳೊಳಗಾಗಿ ಪೂರ್ಣಗೊಳಿಸುವಂತೆ ನಿರ್ಣಯಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.04(f)/(05/25) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿಯಲ್ಲಿರುವ ಮಹಿಳಾ ವಸತಿ ನಿಲಯ ಹಾಗೂ ಪುರುಷ ವಸತಿ ನಿಲಯಗಳಿಗೆ ಮೆಷ್ (ತಂತಿಬೇಲಿ) ಹಾಕಿಸುವ ಕುರಿತು.**

*********

ಸ್ನಾತಕೋತ್ತರ ಕೇಂದ್ರ ಜ್ಞಾನಗಂಗೋತ್ರಿಯಲ್ಲಿರುವ ಮಹಿಳಾ ವಸತಿ ನಿಲಯ ಹಾಗೂ ಪುರುಷ ವಸತಿ ನಿಲಯದಲ್ಲಿ ಆವರಣದ ಕಾಂಪೌಂಡ್ ಗೋಡೆಯು ಮೂರು ಕಡೆಗಳಲ್ಲಿರುತ್ತದೆ. ಒಂದು ಭಾಗದಲ್ಲಿ ಗುಡ್ಡ ಕಡಿದಿರುವುದು ದಿಬ್ಬದ ಹಾಗೆ ಇರುತ್ತದೆ. ಈಗಾಗಲೇ ಗುಡ್ಡದರಂಗವ್ವನಹಳ್ಳಿಯ ಆಸುಪಾಸುಗಳಲ್ಲಿ ಚಿರತೆ ಹಾಗೂ ಕರಡಿಗಳು ಓಡಾಡುತ್ತಿರುವುದು ಕಂಡುಬಂದಿದ್ದು, ಗುಡ್ಡದ ಬದಿಯಿಂದ ಪ್ರಾಣಿಗಳು ಮಹಿಳಾ ಹಾಗೂ ಪುರುಷ ವಸತಿನಿಲಯದೊಳಗೆ ಏಕಾಏಕಿ ಬಂದರೆ, ತುಂಬಾ ತೊಂದರೆಯಾಗುವ ಸಾಧ್ಯತೆಗಳು ಹೆಚ್ಚಿರುವುದರಿಂದ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಾಣಿಗಳು ವಸತಿ ನಿಲಯದ ಆವರಣದೊಳಗೆ ನುಗ್ಗಿ ಬಾರದೇ ಇರುವ ಹಾಗೆ ಮೆಷ್ (ತಂತಿಬೇಲಿ) ಯನ್ನು ಹಾಕಿಸಿಕೊಡುವಂತೆ ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ ಇವರು ಕೋರಿರುವುದರಿಂದ ದರಪಟ್ಟಿ ಕರೆದು ರೂ.5.00 ಲಕ್ಷ ಮಿತಿಯೊಳಗೆ ಕಾಮಗಾರಿ ಕೈಗೊಳ್ಳುವ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿಯಲ್ಲಿರುವ ಮಹಿಳಾ ವಸತಿ ನಿಲಯ ಹಾಗೂ ಪುರುಷ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಾಣಿಗಳು ವಸತಿ ನಿಲಯದ ಆವರಣದೊಳಗೆ ಪ್ರವೇಶಿಸದಂತೆ ತುರ್ತಾಗಿ ಮೆಷ್ (ತಂತಿಬೇಲಿ) ಯನ್ನು ಹಾಕಿಸಲು ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(05/25) |

## –:ಟಿಪ್ಪಣಿ:–

ವಿಷಯ: **ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಇವರಿಗೆ – Faculty of Mechanical Engineering and Informatics, University of Miskolc, Hungary – ವತಿಯಿಂದ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡುತ್ತಿರುವ ಸಂಬಂಧದ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನ್ಯ ಕಾರ್ಯನಿಮಿತ್ತ (OOD) ಮಂಜೂರಾತಿ ಅನುಮೋದನೆ ಕುರಿತು**

ಉಲ್ಲೇಖ: ಮಾನ್ಯ ರೆಕ್ಟರ್‌ರವರ ಪತ್ರ ಸಂಖ್ಯೆ: TNI/482/2025, ದಿನಾಂಕ:16.04.2025.

*****

ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಇವರಿಗೆ ಮಿಸ್ಕಾಕ್ ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಇನ್ಫಾರ್‌ಮೆಟಿಕ್ಸ್ ನಿಕಾಯದ ವತಿಯಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ ಸದರಿ ವಿಶ್ವವಿದ್ಯಾನಿಲಯದ ಮಾನ್ಯ ರೆಕ್ಟರ್‌ರವರು, ಉಪ ರೆಕ್ಟರ್‌ರವರು ಹಾಗೂ ಸೆನೆಟ್ ಸದಸ್ಯರು ನಿರ್ಣಯಿಸಿರುವುದಾಗಿ ಉಲ್ಲೇಖಿತ ಪತ್ರದಲ್ಲಿ ಮಾನ್ಯ ರೆಕ್ಟರ್‌ರವರು ತಿಳಿಸಿರುತ್ತಾರೆ.

ಮಿಸ್ಕಾಕ್ ವಿಶ್ವವಿದ್ಯಾನಿಲಯದ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಇನ್ಫಾರ್‌ಮೆಟಿಕ್ಸ್ ನಿಕಾಯದ ವತಿಯಿಂದ ದಿನಾಂಕ:26.06.2025ರಂದು ಏರ್ಪಡಿಸಲಾಗಿರುವ ಪದವಿ ಪ್ರದಾನ ಕಾರ್ಯಕ್ರಮದಲ್ಲಿ – ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದೆಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದೆ ಹಾಗೂ ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಗಳನ್ನು ಭಾಗವಹಿಸಲು ಆಹ್ವಾನಿಸಲಾಗಿದೆ. ತತ್ಸಂಬಂಧ, ವಿಮಾನಯಾನ ಮತ್ತು ವಸತಿ ಸೌಲಭ್ಯಗಳನ್ನು ಮಿಸ್ಕಾಕ್ ವಿಶ್ವವಿದ್ಯಾನಿಲಯದ ವತಿಯಿಂದ ಭರಿಸಲಾಗುವುದೆಂದು ಮಾನ್ಯ ರೆಕ್ಟರ್‌ರವರು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಇವರ ಪ್ರಯಾಣದ ನಿಮಿತ್ತ ದಿನಾಂಕ:23.06.2025 ರಿಂದ 01.07.2025ರವರೆಗೆ (ಒಟ್ಟು 09 ದಿನಗಳು) ಅನ್ಯ ಕಾರ್ಯನಿಮಿತ್ತ ಮಂಜೂರಾತಿಗಾಗಿ ಸರ್ಕಾರದ ಮೂಲಕ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯುವ ದಿಸೆಯಲ್ಲಿ ಸದರಿ ವಿಷಯವನ್ನು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ **ಪ್ರೊ. ಬಸವಂತಪ್ಪ ಡಿ. ಕುಂಬಾರ** ಇವರು ಮಿಸ್ಕಾಕ್ ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಇನ್ಫಾರ್‌ಮೆಟಿಕ್ಸ್ ನಿಕಾಯದ ವತಿಯಿಂದ ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ "ಹಂಗೇರಿ" – ದೇಶಕ್ಕೆ ದಿನಾಂಕ:23.06.2025 ರಿಂದ 01.07.2025ರ ವರೆಗೆ (ಒಟ್ಟು 09 ದಿನಗಳು) ಅವಧಿಗೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 16 | |
|---|---|
| ವಿಷಯ ಸಂಖ್ಯೆ: | ಸಿಂ.05(b)/(05/25) |

## –ಃಟಿಪ್ಪಣಿಃ–

ವಿಷಯಃ **ಡಾ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಇವರಿಗೆ ಹಂಗೇರಿ ದೇಶಕ್ಕೆ ಹೋಗಿ ಬರಲು ಅನುಮತಿ (OOD) ನೀಡುವ ಬಗ್ಗೆ.**

ಉಲ್ಲೇಖ: 1. ಡೀನರು, ಮಿಸ್ಕಾಕ್ ವಿಶ್ವವಿದ್ಯಾನಿಲಯ, ಹಂಗೇರಿ ಇವರ – ಪತ್ರ ದಿನಾಂಕ:08.04.2025

2. ಡಾ. ಯು.ಎಸ್. ಮಹಾಬಲೇಶ್ವರ, ಪ್ರಾಧ್ಯಾಪಕರು ಇವರ ಪತ್ರಸಂಖ್ಯೆ: ದಾವಿ/ಗಣಿತ/ಹಂಗೇರಿ/2025–26, ದಿನಾಂಕ:06.05.20225

*****

ಉಲ್ಲೇಖ (1)ರ ಪತ್ರದಲ್ಲಿ ಡೀನರು, ಮಿಸ್ಕಾಕ್ ವಿಶ್ವವಿದ್ಯಾನಿಲಯ, ಹಂಗೇರಿ ಇವರು ಡಾ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಪದವಿ ಸಮಾರಂಭದ ಕಾರ್ಯಕ್ರಮದಲ್ಲಿ ಗೌರವಾನ್ವಿತ ವಿಶಿಷ್ಟ ಪ್ರಶಸ್ತಿಯನ್ನು ಪ್ರಧಾನ ಮಾಡುವ ಸಂಬಂಧ ದಿನಾಂಕಃ26.06.2025 ರಂದು ಆಹ್ವಾನಿಸುತ್ತಾ, ಇದಕ್ಕೆ ತಗಲು ವೆಚ್ಚವನ್ನು ಸದರಿ ವಿಶ್ವವಿದ್ಯಾನಿಲಯವು ಭರಿಸುವುದಾಗಿ ತಿಳಿಸಿರುತ್ತಾರೆ ಎಂಬ ಮಾಹಿತಿಯನ್ನು ಉಲ್ಲೇಖ (2)ರ ಪತ್ರದಲ್ಲಿ ತಿಳಿಸುತ್ತಾ, ಸದರಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಲು ತಮಗೆ ದಿನಾಂಕಃ23.06.2025 ರಿಂದ 01.07.2025ರವರೆಗೆ ಅನ್ಯಕಾರ್ಯ ನಿಮಿತ್ತ ರಜೆ (OOD) ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಡಾ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಮಿಸ್ಕಾಕ್ ವಿಶ್ವವಿದ್ಯಾನಿಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಇನ್ಫಾರ್‌ಮೆಟಿಕ್ಸ್ ನಿಕಾಯದ ವತಿಯಿಂದ ಗೌರವ ಪ್ರಾಧ್ಯಾಪಕರನ್ನಾಗಿ ನೇಮಿಸಿ ಆದೇಶ ನೀಡಿರುವುದರಿಂದ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ "ಹಂಗೇರಿ" – ದೇಶಕ್ಕೆ ದಿನಾಂಕ:23.06.2025 ರಿಂದ 01.07.2025ರ ವರೆಗೆ (ಒಟ್ಟು 09 ದಿನಗಳು) ಅವಧಿಗೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.05(c)/(05/25) |

# –:ಟಿಪ್ಪಣಿ:–

ವಿಷಯ: **ಡಾ. ಪ್ರಕಾಶ ಡಿ.ಜಿ. ಮತ್ತು ಡಾ. ಪ್ರಸನ್ನಕುಮಾರ ಬಿ.ಸಿ. ಇವರುಗಳಿಗೆ Yeungnam University, South Korea ದೇಶಕ್ಕೆ ಹೋಗಿ ಬರಲು ಅನುಮತಿ (OOD) ನೀಡುವ ಬಗ್ಗೆ.**

ಉಲ್ಲೇಖ:
1. **Yeungnam University, South Korea** – ಇವರ ಪತ್ರ ದಿನಾಂಕ:05.06.2025
2. ಪ್ರಾಧ್ಯಾಪಕರುಗಳ ಪತ್ರಸಂಖ್ಯೆ: ದಾವಿ/ಗಣಿತ/2025–26, ದಿನಾಂಕ:08.05.2025

*****

ಉಲ್ಲೇಖ (1)ರ ಪತ್ರದಲ್ಲಿ Yeungam University, South Korea ಇವರು **ಡಾ. ಪ್ರಕಾಶ ಡಿ.ಜಿ. ಮತ್ತು ಡಾ. ಪ್ರಸನ್ನಕುಮಾರ ಬಿ.ಸಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ** – ಇವರುಗಳನ್ನು ಜೂನ್ 2025ರ ಮಾಹೆಯಲ್ಲಿ ಒಂದು ಅಥವಾ ಎರಡು ವಾರಗಳ ಅವಧಿಗೆ Yeungam University, South Korea ಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವ ಹಾಗೂ ಇದಕ್ಕೆ ತಗಲು ವೆಚ್ಚವನ್ನು ಸದರಿ ವಿಶ್ವವಿದ್ಯಾನಿಲಯವು ಭರಿಸುವುದಾಗಿ ತಿಳಿಸಿರುತ್ತಾರೆ ಎಂಬ ಮಾಹಿತಿಯನ್ನು ಉಲ್ಲೇಖ (2)ರ ಪತ್ರದಲ್ಲಿ ತಿಳಿಸುತ್ತಾ, ಸದರಿ ವಿಶ್ವವಿದ್ಯಾನಿಲಯಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಭೇಟಿ ನೀಡಲು ದಿನಾಂಕ:07.06.2025 ರಿಂದ 15.06.2025ರವರೆಗೆ ಅನ್ಯಕಾರ್ಯ ನಿಮಿತ್ತ ರಜೆ (OOD) ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

**ಡಾ. ಪ್ರಕಾಶ ಡಿ.ಜಿ. ಮತ್ತು ಡಾ. ಪ್ರಸನ್ನಕುಮಾರ ಬಿ.ಸಿ,** ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ಸಂದರ್ಶಕ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ "Yeungnam University, South Korea" ದೇಶಕ್ಕೆ – ದಿನಾಂಕ:07.06.2025 ರಿಂದ 15.06.2025 ರವರೆಗೆ (ಒಟ್ಟು 09 ದಿನಗಳು) ಅವಧಿಗೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

## –:ಟಿಪ್ಪಣಿ:–

ವಿಷಯಃ **ಪ್ರೊ॥ ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು (ಅಮಾನತು) ಇವರನ್ನು ಸೇವೆಯಲ್ಲಿ ಮರು ಸೇರ್ಪಡೆ ಮಾಡುವ ಬಗ್ಗೆ ಸಲ್ಲಿಸಿರುವ ಮನವಿ ಕುರಿತು.**

ಉಲ್ಲೇಖ: 1. ವಿಶ್ವವಿದ್ಯಾನಿಲಯದ ಅಮಾನತು ಆದೇಶ ಸಂಖ್ಯೆಃ ದಾವಿವಿ/ಮಾಸನಿ /2024–25/4163, ದಿನಾಂಕಃ 06.02.2025

2. ಪ್ರೊ॥ ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು (ಅಮಾನತು) ಇವರ ಮನವಿ ಪತ್ರ ದಿನಾಂಕಃ 17.04.2025

*****

1. ಪ್ರೊ॥ ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು (ಅಮಾನತು), ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ದಿನಾಂಕಃ 01.02.2025ರಂದು ಕೇಂದ್ರೀಯ ತನಿಖಾದಳದ ನಿರ್ದೇಶನಾಲಯದ ವತಿಯಿಂದ ಬಂಧಿಸಿದ್ದುದರ ಹಿನ್ನೆಲೆಯಲ್ಲಿ ದಿನಾಂಕಃ06.02.2025ರಂದು ವಿಶ್ವವಿದ್ಯಾನಿಲಯದಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯದನುಸಾರ ಕೆ.ಸಿ.ಎಸ್ (ಸಿಸಿಎ) ನಿಯಮಗಳು – ನಿಯಮ 10(2) (ಎ) ರನ್ವಯ ಸದರಿಯವರನ್ನು ದಿನಾಂಕಃ01.02.2025 ರಿಂದ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಅಮಾನುತ್ತಿನಲ್ಲಿಡಲಾಗಿದೆ.

2. ತದನಂತರ, ಪ್ರೊ॥ ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು (ಅಮಾನತು) – ಇವರು ದಿನಾಂಕಃ17.04.2025 ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿಯಲ್ಲಿ, ಮಾನ್ಯ ಸಿಬಿಐ ವಿಶೇಷ ನ್ಯಾಯಾಲಯ, ವಿಜಯವಾಡ, ಇದರ ಕ್ರಿಮಿನಲ್ ಮೊಕ್ಕದ್ದಮೆ ಸಂಖ್ಯೆ: Cri. MP. No: 397/2025 ಕ್ಕನುಗುಣವಾಗಿ ಮಾನ್ಯ ವಿಶೇಷ ನ್ಯಾಯ ಮೂರ್ತಿಗಳು ದಿನಾಂಕಃ 03.03.2025ರಂದು ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದ್ದರಿಂದ ನ್ಯಾಯಾಂಗ ಬಂದನದಿಂದ ಬಿಡುಗಡೆಯಾಗಿರುವುದಾಗಿ ತಿಳಿಸಿರುತ್ತಾರೆ.

3. ಸದರಿಯವರು, ತಮ್ಮ ಮನವಿಯಲ್ಲಿ ಅವರ ಬೋಧನಾ ಸೇವೆಗೆ ಅನುಕೂಲವಾಗುವಂತೆ ಅವರನ್ನು ಸೇವೆಗೆ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ. ಅಲ್ಲದೆ, ನ್ಯಾಕ್ ಪೀರ್ ಸಮಿತಿಯ ಸದಸ್ಯರಾಗಿ ಆತ್ಮ ಸಾಕ್ಷಿಯಂತೆ ಕೆಲಸ ಮಾಡಿದ್ದು, ನಿಯಮಬಾಹಿರ ಮತ್ತು ಕಳಂಕ ತರುವ ಕೆಲಸವನ್ನು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡಿರುವ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನವನ್ನು ಮುಂದುವರೆಸುವ ಸಲುವಾಗಿ ಪುನಃ ಅವರಿಗೆ ಬೋಧನಾಂಗ ಮತ್ತು ಸಂಶೋಧನೆಗೆ ಅನುಕೂಲವಾಗುವಂತೆ ಕರ್ತವ್ಯಕ್ಕೆ ಮರು ಸೇರ್ಪಡೆಗೆ ಆದೇಶ ಮಾಡಿಕೊಡಲು ಮನವಿಯಲ್ಲಿ ತಿಳಿಸಿರುತ್ತಾರೆ.

### II ವಿಶ್ವವಿದ್ಯಾನಿಲಯದ ಸವಿವರ ಮಾಹಿತಿ

a) ನಮ್ಮ ವಿಶ್ವವಿದ್ಯಾನಿಲಯದಲ್ಲಿ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ವಿಶ್ವವಿದ್ಯಾನಿಲಯದ (ಕುವೆಂಪು ವಿಶ್ವವಿದ್ಯಾನಿಲಯದ) ಪರಿನಿಯಮಗಳು, ನಿಯಮಗಳು ಮತ್ತು ವಿನಿಯಮಗಳನ್ನು ಅನುಸರಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ಆಡಳಿತ ವ್ಯವಸ್ಥೆಯಲ್ಲಿ ಶಿಸ್ತುಪಾಲನೆಗೆ ಮಾತ್ರ ವಿಶ್ವವಿದ್ಯಾನಿಲಯದ ಸಿಸಿಎ ನಿಯಮಗಳನುಸಾರ ಕ್ರಮಕೈಗೊಳ್ಳಲಾಗುತ್ತಿದೆ. ಸದರಿ ಸಿಸಿಎ ನಿಯಮಗಳು ಮತ್ತು ಸರ್ಕಾರದ ಕೆ.ಸಿ.ಎಸ್. (ಸಿಸಿಎ) ನಿಯಮಗಳು ಒಂದೇ ತರಹ ಇರುತ್ತವೆ. ವಿಶ್ವವಿದ್ಯಾನಿಲಯದ ಆಡಳಿತ ವ್ಯವಸ್ಥೆಗನುಗುಣವಾಗಿ ಸಿಸಿಎ ನಿಯಮಗಳಲ್ಲಿ ವರ್ಗೀಕರಣ ಮಾಡಲಾಗಿದೆ.

ಮುಂದುವರೆದಿದೆ..

ಕುಲಸಚಿವರು

ಕುಲಪತಿಗಳು

b) ಪ್ರೊ॥ ಗಾಯತ್ರಿ ದೇವರಾಜ ಇವರನ್ನು ಕೇಂದ್ರೀಯ ಸಿ.ಬಿ.ಐ. ತನಿಖಾದಳ ದಿನಾಂಕಃ01.02.2025ರಿಂದ ಬಂಧಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ಸದರಿಯವರು 48 ಗಂಟೆಗಳಿಗೂ ಅಧಿಕ ಅವಧಿಗೆ ಸಿ.ಬಿ.ಐ. ಕಸ್ಟಡಿಯಲ್ಲಿ ಬಂಧನದಲ್ಲಿ ಇದ್ದುದರಿಂದಾಗಿ ದಿನಾಂಕಃ06.02.2025ರಂದು ಜರುಗಿದ ವಿಶೇಷ ಸಿಂಡಿಕೇಟಿನ ನಿರ್ಣಯದನುಸಾರ ದಿನಾಂಕಃ 01.02.2025 ರಿಂದ ಅನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಇವರ ಸೇವೆಯನ್ನು ಅಮಾನತ್ತಿನಲ್ಲಿ ಇಡಲಾಗಿದೆ.

c) ಪ್ರೊ॥ ಗಾಯತ್ರಿ ದೇವರಾಜ ಇವರ ಬಂಧನಕ್ಕೆ ಪೂರಕವಾದ ಆರೋಪ ಪಟ್ಟಿಯನ್ನು ಸಿ.ಬಿ.ಐ. (ಕೇಂದ್ರ) ತನಿಖಾದಳ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವುದಿಲ್ಲ. ಅಲ್ಲದೆ, ಸದರಿಯವರ ವಿರುದ್ಧದ ಆರೋಪಗಳಿಗೆ ಮಾನ್ಯ ಸಿ.ಬಿ.ಐ. ನ್ಯಾಯಾಲಯ, ವಿಜಯವಾಡ – ಇಲ್ಲಿ ವಿಚಾರಣೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಶಿಸ್ತುಕ್ರಮಗಳನ್ನು ಜರುಗಿಸುವ ಬಗ್ಗೆ ಪೂರಕ ಮಾಹಿತಿಗಳು ಇರುವುದಿಲ್ಲ ಹಾಗೆಯೆ ಯಾವುದೇ ಕ್ರಮಗಳನ್ನು ಜರುಗಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಮಾನ್ಯ ಸಿ.ಬಿ.ಐ. ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ವಿಶ್ವವಿದ್ಯಾನಿಲಯದ ವತಿಯಿಂದ ಈ ಹಂತದಲ್ಲಿ ವಿಚಾರಣ ಸಮಿತಿಯನ್ನು ರಚಿಸಲು ನಿಯಮಗಳಲ್ಲಿ ಅವಕಾಶ ಇರುವುದು ಕಂಡುಬರುವುದಿಲ್ಲ. ಮಾನ್ಯ ಸಿ.ಬಿ.ಐ. ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯು ಎಷ್ಟು ದಿನದೊಳಗೆ ಪೂರ್ಣಗೊಳ್ಳುತ್ತದೆ ಎಂಬುದಕ್ಕೆ ಸ್ಪಷ್ಟನೆ ಇರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಸರ್ಕಾರದ/ ವಿಶ್ವವಿದ್ಯಾನಿಲಯದ ಸಿಸಿಎ ನಿಯಮಗಳನುಸಾರ 06 (ಆರು) ತಿಂಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಬೇಕೆಂದು ಉಲ್ಲೇಖವಿದೆ.

d) ಅದಾಗ್ಯೂ ಸಹ ವಿಶ್ವವಿದ್ಯಾನಿಲಯದಲ್ಲಿ ಅನುಸರಿಸಲಾಗುತ್ತಿರುವ ಸಿಸಿಎ ನಿಯಮಗಳು – ನಿಯಮ 7 ಹಾಗೂ 8 ಹಾಗೂ ಸರ್ಕಾರದ ಕೆ.ಸಿ.ಎಸ್. (ಸಿಸಿಎ) ನಿಯಮಗಳು – 06 ರನ್ವಯ ಅಮಾನತ್ತನ್ನು ಪರಿಷ್ಕರಿಸುವ ಬಗ್ಗೆ ಅವಕಾಶ ಇರುತ್ತದೆ ಎಂಬುದನ್ನು ಸಭೆಯ ಅವಗಾಹನೆಗೆ ಸಲ್ಲಿಸಲಾಗಿದೆ.

e) ಪ್ರೊ॥ ಗಾಯತ್ರಿ ದೇವರಾಜ ರವರು ಹಿರಿಯ ಪ್ರಾಧ್ಯಾಪಕರಾಗಿದ್ದು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿಗಳ ಬೋಧನೆಗೆ ಮತ್ತು ಸಂಶೋಧಕರಿಗೆ ಅನುಕೂಲವಾಗುವಂತೆ ಅವರ ಬೋಧನಾ/ಸಂಶೋಧನಾ ಮಾರ್ಗದರ್ಶನ ಅತ್ಯಾವಶ್ಯಕವೆಂದು ಕಂಡು ಬರುತ್ತದೆ.

f) ಪ್ರೊ॥ ಗಾಯತ್ರಿ ದೇವರಾಜ ಇವರಿಗೆ ಮಾನ್ಯ ಸಿಬಿಐ ವಿಶೇಷ ನ್ಯಾಯಾಲಯವು ಮಂಜೂರು ಮಾಡಿರುವ ಜಾಮೀನು ಯಾವುದೇ ಅರ್ಹತೆಯ ಆಧಾರದ (Merits of the Case) ಮೇರೆಗೆ ಮಂಜೂರಾಗಿರುವುದಿಲ್ಲ ಎಂಬುದು ಗಮನಾರ್ಹ ವಿಷಯ.

g) ಆದುದರಿಂದ, ಸದರಿಯವರ ಮನವಿಯ ಪ್ರಸ್ತಾವನೆಯನ್ನು ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಗೌರವಾನ್ವಿತ ಕುಲಾಧಿಪತಿಗಳಿಗೆ ಸಲ್ಲಿಸಿ ಅವರ ಅನುಮೋದನೆಯನ್ನು ಪಡೆದ ನಂತರ ಪ್ರೊ॥ ಗಾಯತ್ರಿ ದೇವರಾಜ ಇವರ ಸೇವೆಯನ್ನು ವಿಶ್ವವಿದ್ಯಾನಿಲಯಕ್ಕೆ ಮರು ಸೇರ್ಪಡೆ ಮಾಡುವ ಬಗ್ಗೆ ಕ್ರಮಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಈ ಮೇಲಿನ ಸವಿವರ ಮಾಹಿತಿಯನ್ನು ದಿನಾಂಕಃ13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

**ಮುಂದುವರೆದಿದೆ..**

ಕುಲಸಚಿವರು　　　　　　　　　　ಕುಲಪತಿಗಳು

:: ನಿರ್ಣಯ ::

ಪ್ರೊ॥ ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು (ಅಮಾನತು) ಇವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿಯಲ್ಲಿ ತಮ್ಮನ್ನು ವಿಶ್ವವಿದ್ಯಾನಿಲಯದ ಸೇವೆಗೆ ಮರುಸೇರ್ಪಡೆ ಮಾಡುವ ಸಂಬಂಧದ ಪ್ರಸ್ತಾವನೆಯನ್ನು, ಕಾರ್ಯಾಲಯದ ಟಿಪ್ಪಣಿಯನ್ನು ಹಾಗೂ ಮಾನ್ಯ ಕುಲಪತಿಗಳು ಸಭೆಗೆ ನೀಡಿದ ವಿವರಗಳನ್ನು ಸಭೆಯು ಗಮನಿಸಿತು.

ಪ್ರಸ್ತುತ ಪ್ರೊ॥ ಗಾಯತ್ರಿ ದೇವರಾಜ ಇವರಿಗೆ ಮಾನ್ಯ ಸಿಬಿಐ ವಿಶೇಷ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದ್ದು, ವಿಚಾರಣೆಯು ಇನ್ನು ಪ್ರಗತಿಯಲ್ಲಿದೆ. ಆದಾಗ್ಯೂ, ವಿಶ್ವವಿದ್ಯಾನಿಲಯದ ಸೂಕ್ಷ್ಮಜೀವಾಣು ವಿಭಾಗದ ವಿದ್ಯಾರ್ಥಿಗಳಿಗೆ ಬೋಧನಾ ಹಾಗೂ ಸಂಶೋಧಕರಿಗೆ ಮಾರ್ಗದರ್ಶನ ಮತ್ತು ವಿಶ್ವವಿದ್ಯಾನಿಲಯದ ಸಮಗ್ರ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿಯವರ ಸೇವೆಯನ್ನು ಸರ್ಕಾರದ ಸಿಸಿಎ ನಿಯಮಗಳು – ನಿಯಮ – 5 ಮತ್ತು 6 ಹಾಗೂ ವಿಶ್ವವಿದ್ಯಾನಿಲಯದಲ್ಲಿ ಅನುಸರಿಸಲಾಗುತ್ತಿರುವ ಸಿಸಿಎ ಪರಿನಿಯಮಗಳು – ನಿಯಮ 7 ಮತ್ತು 8 ರನ್ವಯ ಗೌರವಾನ್ವಿತ ಕುಲಾಧಿಪತಿಗಳಿಗೆ ಈ ಕುರಿತು ಪತ್ರಿಸಲು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿತು.

ಅದರಂತೆ, ವಿಶ್ವವಿದ್ಯಾನಿಲಯದ ಪ್ರಧಾನ ಶಿಸ್ತು ಪ್ರಾಧಿಕಾರವಾದ ಗೌರವಾನ್ವಿತ ಕುಲಾಧಿಪತಿಗಳಿಗೆ ಸಿಂಡಿಕೇಟಿನ ನಿರ್ಣಯವನ್ನು ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಂಡು ತದನಂತರ ವಿಶ್ವವಿದ್ಯಾನಿಲಯದ ವತಿಯಿಂದ ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.05(e)/(05/25) |

**–:ಟಿಪ್ಪಣಿ:–**

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ನೇಮಕ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ: 12.05.2025

*********

ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಈ ಕೆಳಕಂಡ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಎರಡು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ, ಸದರಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಜೇಷ್ಠತೆಯ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ದಿನಾಂಕ:13.05.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ ಸಂ. | ಹೆಸರು | ವಿಭಾಗ | ಅಧ್ಯಕ್ಷರು/ ಸಂಯೋಜನಾಧಿಕಾರಿಗಳು | ಅವಧಿ |
|---|---|---|---|---|
| 1 | ಡಾ. ಶಿವಕುಮಾರ್ ಕಣಸೋಗಿ, ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ | ಪತ್ರಿಕೋದ್ಯಮ | ಅಧ್ಯಕ್ಷರು | 15.06.2023 ರಿಂದ 14.06.2025 |
| 2 | ಡಾ. ಪ್ರಸನ್ನ ಕುಮಾರ್ ಬಿ.ಸಿ, ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ | ಗಣಿತಶಾಸ್ತ್ರ | ಅಧ್ಯಕ್ಷರು | 15.06.2023 ರಿಂದ 14.06.2025 |
| 3 | ಡಾ. ಶ್ರೀನಿವಾಸ್ ಜಿ, ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ | ಪ್ರಾಣಿಶಾಸ್ತ್ರ | ಸಂಯೋಜನಾಧಿಕಾರಿ | 01.07.2023 ರಿಂದ 30.06.2025 |
| 4 | ಡಾ. ಗೋವಿಂದಪ್ಪ ಎಂ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ. | ಸಸ್ಯಶಾಸ್ತ್ರ | ಅಧ್ಯಕ್ಷರು | 01.07.2023 ರಿಂದ 30.06.2025 |
| 5 | ಡಾ. ವೆಂಕಟೇಶ್ ಕೆ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ | ಶಿಕ್ಷಣ | ಅಧ್ಯಕ್ಷರು | 15.06.2023 ರಿಂದ 14.06.2025 |
| 6 | ಡಾ. ಜಯರಾಜ್ ಎಂ. ಚಿಕ್ಕಪಾಟೀಲ್, ಸಹಾಯಕ ಪ್ರಾಧ್ಯಾಪಕರು | ದೃಶ್ಯಕಲಾ ಮಹಾವಿದ್ಯಾನಿಲಯ | ಪ್ರಭಾರೆ ಪ್ರಾಂಶುಪಾಲರು | 01.07.2023 ರಿಂದ 30.06.2025 |
| 7 | ಡಾ. ಲೋಕೇಶ್ ಎಂ.ಯು, ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ. | ಸಮಾಜಕಾರ್ಯ | ಅಧ್ಯಕ್ಷರು | 05.07.2023 ರಿಂದ 04.07.2025 |
| 8 | ಡಾ. ಹುಚ್ಚೆಗೌಡ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ | ಅರ್ಥಶಾಸ್ತ್ರ | ಅಧ್ಯಕ್ಷರು | 07.08.2023 ರಿಂದ 06.08.2025 |
| 9 | ಡಾ. ನಾಗಸ್ವರೂಪ ಹೆಚ್.ಫಿ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ. | ರಸಾಯನಶಾಸ್ತ್ರ | ಅಧ್ಯಕ್ಷರು | 22.08.2023 ರಿಂದ 21.08.2025 |
| 10 | ಡಾ. ಶರತ್ ಆರ್, ಪ್ರಾಧ್ಯಾಪಕರು, ಆಹಾರತಂತ್ರಜ್ಞಾನ ವಿಭಾಗ | ಆಹಾರತಂತ್ರಜ್ಞಾನ | ಅಧ್ಯಕ್ಷರು | 22.08.2023 ರಿಂದ 21.08.2025 |

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

| ಕ್ರ.ಸಂ. | ಹೆಸರು | ವಿಭಾಗ | ಹುದ್ದೆ | ಅವಧಿ |
|---|---|---|---|---|
| 1. | ಡಾ. ಶಿವಕುಮಾರ್ ಕಣಸೋಗಿ, ಪ್ರಾಧ್ಯಾಪಕರು | ಪತ್ರಿಕೋದ್ಯಮ | ಅಧ್ಯಕ್ಷರು | 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ. |
| 2. | ಡಾ. ಯು.ಎಸ್. ಮಹಾಬಲೇಶ್ವರ್ ಪ್ರಾಧ್ಯಾಪಕರು | ಗಣಿತಶಾಸ್ತ್ರ | ಅಧ್ಯಕ್ಷರು | |

ಮುಂದುವರೆದಿದೆ..

ಕುಲಸಚಿವರು                ಕುಲಪತಿಗಳು

| | | | | |
|---|---|---|---|---|
| 3. | ಡಾ. ಅಂಬರೀಶ್ ಛಬ್ಬಿ<br>ಸಹಾಯಕ ಪ್ರಾಧ್ಯಾಪಕರು | ಪ್ರಾಣಿಶಾಸ್ತ್ರ | ಸಂಯೋಜನಾಧಿಕಾರಿ | 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರಗೆ. |
| 4. | ಡಾ. ಕೊಟ್ರೇಶ್ ಡಿ<br>ಪ್ರಾಧ್ಯಾಪಕರು | ಸಸ್ಯಶಾಸ್ತ್ರ | ಅಧ್ಯಕ್ಷರು | |
| 5. | ಡಾ. ವೆಂಕಟೇಶ್ ಕೆ<br>ಪ್ರಾಧ್ಯಾಪಕರು | ಶಿಕ್ಷಣ | ಅಧ್ಯಕ್ಷರು | |
| 6. | ಡಾ. ಸತೀಶ್ ಕುಮಾರ್ ಪಂಚಪ್ಪ<br>ಸಹಾಯಕ ಪ್ರಾಧ್ಯಾಪಕರು | ದೃಶ್ಯಕಲಾ ಮಹಾವಿದ್ಯಾನಿಲಯ | ಪ್ರಭಾರೆ ಪ್ರಾಂಶುಪಾಲರು | |
| 7. | ಡಾ. ಶಿವಲಿಂಗಪ್ಪ ಬಿ.ಪಿ.<br>ಪ್ರಾಧ್ಯಾಪಕರು | ಸಮಾಜಕಾರ್ಯ | ಅಧ್ಯಕ್ಷರು | |
| 8. | ಡಾ. ಆರ್. ಸೆಲ್ವಿ<br>ಪ್ರಾಧ್ಯಾಪಕರು | ಅರ್ಥಶಾಸ್ತ್ರ | ಅಧ್ಯಕ್ಷರು | |
| 9. | ಡಾ. ಮಮತಾ ಜಿ.ಪಿ<br>ಪ್ರಾಧ್ಯಾಪಕರು | ರಸಾಯನಶಾಸ್ತ್ರ | ಅಧ್ಯಕ್ಷರು | |
| 10. | ಡಾ. ಶಂಕರ್ ಜೆ<br>ಪ್ರಾಧ್ಯಾಪಕರು | ಆಹಾರತಂತ್ರಜ್ಞಾನ | ಅಧ್ಯಕ್ಷರು | |

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(05/25) |

# -: ಟಿಪ್ಪಣಿ :-

**ವಿಷಯ:** **M/s Muragod Pendal Contractor, Belagavi – ಇವರಿಂದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್(ಶಾಮಿಯಾನ), ಲೈಟಿಂಗ್, ಆಸನ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆಯ ಬಿಲ್ಲುಗಳ ಮೊತ್ತ ಪಾವತಿಸಲು ಹಾಗೂ ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:06.05.2025ರಂದು ಬೆಳಿಗ್ಗೆ 11:00 ಗಂಟೆಗೆ ಕುಲಸಚಿವರ (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಉಪಸಮಿತಿಯು ಸಭೆಯಲ್ಲಿ ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ-ಟೆಂಡರ್) ಸಂಸ್ಥೆಯವರು 12ನೇ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್(ಶಾಮಿಯಾನ), ಲೈಟಿಂಗ್, ಆಸನ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆಯನ್ನು ಸರಬರಾಜು ಮಾಡಿರುತ್ತಾರೆ ಮತ್ತು ಸದರಿ ಬಿಲ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ಸಂಸ್ಥೆಯವರಿಗೆ ರೂ.27,99,000-00ಗಳನ್ನು (ರೂಪಾಯಿ ಇಪ್ಪತ್ತೇಳು ಲಕ್ಷದ ತೊಂಬತ್ತೊಂಬತ್ತು ಸಾವಿರದ ಮಾತ್ರ) ಪಾವತಿ ಮಾಡಲು ಪಾವತಿಸಲು ಶಿಫಾರಸ್ಸು ಮಾಡಲಾಗಿದೆ.

| ಕ್ರ. ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ |
|---|---|---|---|
| 01 | M/s Muragod Pendal Contractor, Belagavi-590 005 | Invoice No. 01/2025-26 Date:23.04.2025 | 27,99,000=00 |

ಈ ಹಿನ್ನೆಲೆಯಲ್ಲಿ ಉಪಸಮಿತಿಯು ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s Muragod Pendal Contractor, Belagavi-590005 – ಇವರಿಗೆ ರೂ.27,99,000-00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್(ಶಾಮಿಯಾನ), ಲೈಟಿಂಗ್, ಆಸನ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆಯನ್ನು M/s Muragod Pendal Contractor, Belagavi-590005 - ಇವರಿಂದ ಪಡೆಯಲಾಗಿದ್ದು ಸದರಿ ಬಿಲ್ಲಿನ ಬಾಬ್ತು **ರೂ.27,99,000-00** ಗಳ ಬಿಲ್ಲುಗಳನ್ನು ದಿನಾಂಕ:06.05.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು **ರೂ.27,99,000-00** ಗಳನ್ನು M/s Muragod Pendal Contractor, Belagavi-590005 ಇವರಿಗೆ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(05/25) |

## -: ಟಿಪ್ಪಣಿ :-

ವಿಷಯ: **M/s Sri Nandi Enterprises, Davanagere – ಇವರಿಂದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಉಪಹಾರ ಮತ್ತು ಊಟವನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತ ಪಾವತಿಸಲು ಹಾಗೂ ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:06.05.2025ರಂದು ಬೆಳಿಗ್ಗೆ 11:00 ಗಂಟೆಗೆ ಕುಲಸಚಿವರ (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಉಪಸಮಿತಿಯು ಸಭೆಯಲ್ಲಿ 12ನೇ ಘಟಿಕೋತ್ಸವ ಸಮಾರಂಭಕ್ಕೆ ನಿಯಮಾನುಸಾರ ದರಪಟ್ಟಿಯನ್ನು ಕರೆದು ಅದರಲ್ಲಿ ಕನಿಷ್ಠ ದರ ಸೂಚಿಸಿ ಯಶಸ್ವಿಯಾಗಿರುವ M/s. Sri Nandi Enterprises, Davangere. ಇವರು ಸಿಂಡಿಕೇಟ್ ಸದಸ್ಯರು / ವಿದ್ಯಾ ವಿಷಯಕ ಪರಿಷತ್ತು ಸದಸ್ಯರು / ಪತ್ರಿಕಾ ಮಾಧ್ಯಮದವರು/ ಪತ್ರಿಕಾ ಕಮಿಟಿ / ಗಣ್ಯ ವ್ಯಕ್ತಿಗಳು / ಪೋಷಕರು / ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಎಲ್ಲಾ ಭೋಧಕ/ಭೋಧಕೇತರ ಸಿಬ್ಬಂದಿಗಳಿಗೆ, ಉಪಹಾರ ಮತ್ತು ಊಟವನ್ನು ಸರಬರಾಜು ಮಾಡಿರುತ್ತಾರೆ ಹಾಗೂ ಸದರಿ ಸಂಸ್ಥೆಯವರ ಬಿಲ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ ರೂ.4,95,500-00ಗಳನ್ನು (ರೂಪಾಯಿ ನಾಲ್ಕು ಲಕ್ಷದ ತೊಂಬತ್ತೈದು ಸಾವಿರದ ಐದು ನೂರು ಮಾತ್ರ) ಪಾವತಿ ಮಾಡಲು ಪಾವತಿಸಲು ಶಿಫಾರಸ್ಸು ಮಾಡಲಾಗಿದೆ.

| ಕ್ರ. ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ |
|---|---|---|---|
| 01 | M/s. Sri Nandi Enterprises, Davangere-577 003. | Invoice No. 16 Date:07.04.2025 | 4,95,500=00 |

ಈ ಹಿನ್ನೆಲೆಯಲ್ಲಿ ಉಪಸಮಿತಿಯು ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s Sri Nandi Enterprises, Davangere – ಇವರಿಗೆ ರೂ.4,95,500-00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸಿಂಡಿಕೇಟ್ ಸದಸ್ಯರು/ ವಿದ್ಯಾವಿಷಯಕ ಪರಿಷತ್ತು ಸದಸ್ಯರು /ಪತ್ರಿಕಾ ಮಾಧ್ಯಮದವರು/ಪತ್ರಿಕಾ ಕಮಿಟಿ /ಗಣ್ಯ ವ್ಯಕ್ತಿಗಳು / ಪೋಷಕರು/ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ, ಉಪಹಾರ ಮತ್ತು ಊಟದ ಸರಬರಾಜು ವ್ಯವಸ್ಥೆಯನ್ನು M/s Sri Nandi Enterprises, Davangere - ಇವರಿಂದ ಪಡೆಯಲಾಗಿದ್ದು ಸದರಿ ಬಿಲ್ಲಿನ ಬಾಬ್ತು **ರೂ.4,95,500-00** ಗಳ ಬಿಲ್ಲುಗಳನ್ನು ದಿನಾಂಕ:06.05.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು **ರೂ.4,95,500-00** ಗಳನ್ನು M/s Sri Nandi Enterprises, Davangere ಇವರಿಗೆ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

| ಕುಲಸಚಿವರು | ಕುಲಪತಿಗಳು |
|---|---|

| ಪರೀಕ್ಷಾಂಗ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(05/25) |

## –: ಟಿಪ್ಪಣಿ :–

ವಿಷಯ: **M/s Shiva Offset Printers & Publishers, Belagavi** – ಇವರಿಂದ ಖರೀದಿಸಿರುವ ಲೇಖನ ಸಾಮಾಗ್ರಿ/ ಮುದ್ರಿತ ಸಾಮಾಗ್ರಿಗಳ ಬಿಲ್ಲಿನ ಮೊತ್ತ ಪಾವತಿಸಲು ಹಾಗೂ ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

*********

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:06.05.2025ರಂದು ಬೆಳಿಗ್ಗೆ 11:00 ಗಂಟೆಗೆ ಕುಲಸಚಿವರ (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಉಪಸಮಿತಿಯು ಸಭೆಯಲ್ಲಿ ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಮುದ್ರಿತ ಲೇಖನ ಸಾಮಾಗ್ರಿಗಳ ವಿವರಗಳನ್ನು ಮತ್ತು ಬಿಲ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ಸಂಸ್ಥೆಯವರಿಗೆ ರೂ.6,93,300–00ಗಳನ್ನು (ರೂಪಾಯಿ ಆರು ಲಕ್ಷದ ತೊಂಬತ್ತ್ಮೂರು ಸಾವಿರದ ಮೂರು ನೂರು ಮಾತ್ರ) ಪಾವತಿ ಮಾಡಲು ಪಾವತಿಸಲು ಶಿಫಾರಸ್ಸು ಮಾಡಲಾಗಿದೆ.

| ಕ್ರ. ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ |
|---|---|---|---|
| 01 | M/s.Shiva Offset Printers And Publishers, Belagavi-590 016. | Invoice No.38 Date:03.05.2025 | 6,93,300=00 |

ಈ ಹಿನ್ನೆಲೆಯಲ್ಲಿ ಉಪಸಮಿತಿಯು ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s Shiva Offset Printers and Publishers, Belagavi – ಇವರಿಗೆ ರೂ.6,93,300–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಮುದ್ರಿತ ಲೇಖನ ಸಾಮಾಗ್ರಿಗಳನ್ನು ಇ-ಟೆಂಡರ್ ಮೂಲಕ M/s Shiva Offset Printers and Publishers, Belagavi - ಇವರಿಂದ ಪಡೆಯಲಾಗಿದ್ದು ಸದರಿ ಬಿಲ್ಲಿನ ಬಾಬ್ತು ರೂ.6,93,300–00 ಗಳ ಬಿಲ್ಲುಗಳನ್ನು ದಿನಾಂಕ:06.05.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿ ಸದರಿ ಬಿಲ್ಲಿನ ಬಾಬ್ತು ರೂ.6,93,300–00 ಗಳನ್ನು M/s Shiva Offset Printers and Publishers, Belagavi ಇವರಿಗೆ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(05/25) |

# –: ಟಿಪ್ಪಣಿ :–

**ವಿಷಯ:** **M/s. Uniclare Solutions Pvt. Ltd., Bengalure & M/s. Logisys, Bengaluru - ಈ ಸಂಸ್ಥೆಯೊಂದಿಗೆ ಪರೀಕ್ಷಾ ತಂತ್ರಾಂಶ ಸೇವಾ ದರಗಳನ್ನು ನಿಗಧಿಪಡಿಸುವ ಕುರಿತು.**

ಉಲ್ಲೇಖ:
1. M/s. Uniclare Solutions Pvt. Ltd., Bengalure- ಇವರ ಪತ್ರ ಸಂಖ್ಯೆ:DUD/UC/11-01/24-25 ದಿನಾಂಕ:30.11.2024.
2. M/s. Logisys, Bengaluru- ಇವರ ಪತ್ರ ಸಂಖ್ಯೆ:DUD/UC/11-01/24-25 ದಿನಾಂಕ:30.11.2024.
3. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ:30.11.2024

*********

ನವೆಂಬರ್ /ಡಿಸೆಂಬರ್–2018ರಲ್ಲಿ ಪರೀಕ್ಷಾ ತಂತ್ರಾಂಶಗಳಿಗೆ ಸಂಬಂಧಿಸಿದ ಕಾರ್ಯಗಳಿಗೆ ಇ–ಟೆಂಡರ್ ಮೂಲಕ M/s Uniclare Solutions Pvt. Ltd., Bengalure & M/s. Logisys, Bengaluru. ಈ ಸಂಸ್ಥೆಗಳೊಂದಿಗೆ 05 ವರ್ಷಗಳ ಅವಧಿಯವರೆಗೆ ಅಕ್ಟೋಬರ್–2023ರಲ್ಲಿ ಒಂದು ವರ್ಷದ ಅವಧಿಗೆ Non-NEP ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಕ್ಕೆ ಮುಂದುವರೆಸಲಾಗಿತ್ತು. ಸದರಿ ಅವಧಿಯು ಮುಕ್ತಾಯವಾಗಿರುತ್ತದೆ.

ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ ಮತ್ತು ಬಿ.ಪಿ.ಇಡಿ. ಪದವಿಗಳಲ್ಲಿ ಇನ್ನು ಬಾಕಿ ಇರುವ ಹಾಗೂ ದ್ವಿಗುಣ ಅವಧಿ ಮೀರಿರುವ ವಿದ್ಯಾರ್ಥಿಗಳಿಗೆ ಪ್ರಸ್ತುತ ಅವಕಾಶ ಕಲ್ಪಿಸಿರುವುದರಿಂದ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಒದಗಿಸಲು ಅಕ್ಟೋಬರ್–2024 ರಿಂದ ಮುಂದಿನ ಒಂದು ವರ್ಷದ ಅವಧಿಗೆ ವಿಸ್ತರಿಸಿ ಕರಾರು ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:30.11.2024 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿರುತ್ತದೆ. ಆದರೆ ಸದರಿ ಸಭೆಯಲ್ಲಿ ಪರೀಕ್ಷಾ ತಂತ್ರಾಂಶ ಸೇವೆಗಳ ದರಗಳನ್ನು ನಿಗದಿಪಡಿಸಿರುವ ಸಂಬಂಧ ನಿರ್ಣಯ ಕೈಗೊಂಡಿರುವುದಿಲ್ಲ.

ದಿನಾಂಕ:30.11.2024ರಂದು M/s Uniclare Solutions Pvt. Ltd., Bengalure & M/s Logisys, Bengaluru- ಈ ಸಂಸ್ಥೆಯವರು ಪ್ರತಿ ವಿದ್ಯಾರ್ಥಿಗೆ ಕ್ರಮವಾಗಿ ರೂ.235=00 ಮತ್ತು ರೂ.365=00ರಂತೆ ನಿಗಧಿಪಡಿಸಲು ಹಾಗೂ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದಲ್ಲಿ, ಕನಿಷ್ಠ 2000 ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಿಲ್ಲನ್ನು ಪಾವತಿಸಲು ಸೇವಾ ದರಗಳನ್ನು ನಿಗಧಿಪಡಿಸಲು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲೆ ಪ್ರಸ್ತಾಪಿಸುವ ಸಂಸ್ಥೆಯವರು ಅಕ್ಟೋಬರ್–2024ರಿಂದ ಮುಂದಿನ ಒಂದು ವರ್ಷದ ಅವಧಿಗೆ ಪರೀಕ್ಷಾ ತಂತ್ರಾಂಶ ಸೇವಾ ದರಗಳನ್ನು ನಿಗಧಿಪಡಿಸಲು ಸಲ್ಲಿಸಿರುವ ಮನವಿ ಪತ್ರಗಳನ್ನು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಬೇಕಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೆ: ಲಾಜಿಸಿಸ್ ಮತ್ತು ಯುನಿಕ್ಲೇರ್ ಸಲೂಷನ್ಸ್ ಪ್ರೈ ಲಿ., ಬೆಂಗಳೂರು – ಈ ಸಂಸ್ಥೆಗಳವರೊಂದಿಗೆ ಪರೀಕ್ಷಾ ತಂತ್ರಾಂಶ ಸೇವಾ ದರವನ್ನು ರೂ.800/– (Uniclare–300, Logisys–500 ಒಬ್ಬ ವಿದ್ಯಾರ್ಥಿಗೆ) ನಿಗದಿಪಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಪರೀಕ್ಷಾಂಗ ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(05/25) |

## –: ಟಿಪ್ಪಣಿ :–

ವಿಷಯ: ಪರೀಕ್ಷಾ ವಿಭಾಗಕ್ಕೆ ಅಂಕಪಟ್ಟಿಗಳನ್ನು ಮುದ್ರಿಸಲು GeM ಅಡಿಯಲ್ಲಿ 02 ಪ್ರಿಂಟರ್‌ಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.

*********

ಎನ್‌ಇಪಿ/ಎಸ್‌ಇಪಿ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ., ಮತ್ತು ಬಿ.ಪಿ.ಇಡಿ., ಪದವಿ ವಿದ್ಯಾರ್ಥಿಗಳಿಗೆ ಸರ್ಕಾರದ ನಿರ್ದೇಶಾನುಸಾರ UUCMS ಪರೀಕ್ಷಾ ತಂತ್ರಾಂಶವನ್ನು ಬಳಸಲಾಗುತ್ತಿರುವುದರಿಂದ, ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿರುತ್ತದೆ ಹಾಗೂ ಕಛೇರಿ ವಿವಿಧ ಕಾರ್ಯಗಳ ಕಾಗದ ಪತ್ರಗಳನ್ನು ಮುದ್ರಿಸಲು ಪ್ರಿಂಟರ್ ಅವಶ್ಯಕತೆ ಇರುತ್ತದೆ.

ಆದುದರಿಂದ ಸರ್ಕಾರದ ಇ–ಮಾರ್ಕೇಟಿಂಗ್ (GeM) ಅಡಿಯಲ್ಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಲು 01 ಹೈಸ್ಪೀಡ್ ಪ್ರಿಂಟರ್ ಮತ್ತು ಕಛೇರಿ ಕೆಲಸಗಳಿಗೆ 01 ಒಟ್ಟು 02 ಪ್ರಿಂಟರ್‌ಗಳನ್ನು ಖರೀದಿಸಲು ಅನುಮತಿಗಾಗಿ ಹಾಗೂ ಪ್ರಿಂಟರ್‌ಗಳ ಖರೀದಿಗೆ ತಗಲಬಹುದಾದ ವೆಚ್ಚ ಒಟ್ಟು ರೂ.8,89,100=00ಗಳನ್ನು (6,96,100+1,93,000) ಸಂಬಂಧಿಸಿದ ಸರಬರಾಜು ಸಂಸ್ಥೆಗೆ ಪಾವತಿಸುವ ಕುರಿತು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ಎನ್‌ಇಪಿ/ಎಸ್‌ಇಪಿ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ., ಮತ್ತು ಬಿ.ಪಿ.ಇಡಿ., ಪದವಿ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಲು 01 ಹೈಸ್ಪೀಡ್ ಪ್ರಿಂಟರ್ ಹಾಗೂ ಕಛೇರಿ ವಿವಿಧ ಕಾರ್ಯಗಳ ಕಾಗದ ಪತ್ರಗಳನ್ನು ಮುದ್ರಿಸಲು 01 ಪ್ರಿಂಟರ್‌ನ್ನು (ಒಟ್ಟು 02 ಪ್ರಿಂಟರ್) ಸರ್ಕಾರದ ಇ–ಮಾರ್ಕೇಟಿಂಗ್ Government e Marketplace (GeM) ಅಡಿಯಲ್ಲಿ ಪ್ರಿಂಟರ್‌ಗಳನ್ನು ಖರೀದಿಸಿ ಹಾಗೂ ಪ್ರಿಂಟರ್‌ಗಳಿಗೆ ತಗಲುವ ಒಟ್ಟು ರೂ.8,89,100=00 ಗಳನ್ನು (6,96,100+1,93,000) ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.06(f)/(05/25) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಸಂಭಾವನೆ ಪರಿಷ್ಕರಿಸಲು ಸಮಿತಿ ರಚಿಸುವ ಕುರಿತು.**

ಉಲ್ಲೇಖ: ವಿಶ್ವವಿದ್ಯಾನಿಲಯದ ವಿವಿಧ ಕಾಲೇಜು ಪ್ರಾಚಾರ್ಯರುಗಳ/ವಿವಿಧ ವಿಷಯಗಳ ಅಧ್ಯಾಪಕರುಗಳ ವೇದಿಕೆ ಮನವಿಗಳು

*********

ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ನೀಡಲಾಗುತ್ತಿರುವ ಸಂಭಾವನೆ ದರಗಳು ಸುಮಾರು ವರ್ಷಗಳಿಂದ ದರ ಪರಿಷ್ಕರಣೆಯಾಗದೇ ಹಳೆಯ ದರಗಳಲ್ಲಿ ನೀಡಲಾಗುತ್ತಿದ್ದು, ಸಂಭಾವನೆ ದರಗಳನ್ನು ಪರಿಷ್ಕರಿಸುವಂತೆ ಉಲ್ಲೇಖಿತ ಪತ್ರಗಳಲ್ಲಿ ಕಾಲೇಜು ಪ್ರಾಚಾರ್ಯರುಗಳು/ವಿವಿಧ ವಿಷಯಗಳ ಅಧ್ಯಾಪಕರ ವೇದಿಕೆಗಳು ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಕರ್ನಾಟಕ ಸರ್ಕಾರವು ಏಕರೂಪ ಶುಲ್ಕ ನಿಗದಿಪಡಿಸಿ ಅಳವಡಿಸಿಕೊಳ್ಳುವಂತೆ ತಿಳಿಸಲಾಗಿದೆ. ಈ ಸಂಬಂಧ ಸರ್ಕಾರದ ಏಕರೂಪ ಶುಲ್ಕಗಳಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಸಂಭಾವನೆ ದರಗಳನ್ನು ಅವಲೋಕಿಸಿ ಸೂಕ್ತ ಸಂಭಾವನೆ ದರಗಳನ್ನು ನಿಗದಿಪಡಿಸಿ ಪರಿಷ್ಕರಿಸಲು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಲು ಮತ್ತು ಸದರಿ ಸಮಿತಿಯು ನೀಡುವ ವರದಿಯನ್ವಯ ಸಂಭಾವನೆ ದರಗಳನ್ನು ವಿಶ್ವವಿದ್ಯಾನಿಯದಲ್ಲಿ ಅಳವಡಿಸಿ ಪರಿಷ್ಕರಣೆ ಮಾಡಲು, ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಏಕರೂಪ ಶುಲ್ಕಗಳಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಸಂಭಾವನೆ ದರಗಳನ್ನು ಅವಲೋಕಿಸಿ ಸೂಕ್ತ ಸಂಭಾವನೆ ದರಗಳನ್ನು ನಿಗದಿಪಡಿಸಿ ಪರಿಷ್ಕರಿಸಲು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.06(g)/(05/25) |

## –: ಟಿಪ್ಪಣಿ :–

**ವಿಷಯ: ಹೊಳಲ್ಕರೆಯಲ್ಲಿರುವ ಬಿ. ಪರಮೇಶ್ವರಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದಿದೆ ಎನ್ನಲಾಗಿರುವ ಪರೀಕ್ಷಾ ಅಕ್ರಮದ ಬಗ್ಗೆ.**

ಉಲ್ಲೇಖ:
1. ಸದರಿ ಕಾಲೇಜಿನ ನೊಂದ ವಿದ್ಯಾರ್ಥಿಗಳ ಪತ್ರ ದಿನಾಂಕ:11.02.2025.
2. ವಿ.ವಿ. ಪತ್ರಸಂಖ್ಯೆ:ದಾವಿ/ಪವಿ/ಆ.ಶಾ./04/2024–25/17/1 ದಿ:09.04.2025
3. ವಿ.ವಿ. ಪತ್ರಸಂಖ್ಯೆ:ದಾವಿ/ಪವಿ/ಆ.ಶಾ./04/2024–25/192 ದಿ:23.04.2025
4. ಪರಿಶೀಲನಾ ಸಮಿತಿಯ ಶಿಫಾರಸ್ಸು ವರದಿ ದಿನಾಂಕ:08.05.2025
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12.05.2025.

*********

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆಯಲ್ಲಿರುವ ಬಿ.ಪರಮೇಶ್ವರಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ದಿನಾಂಕ:30.01.2025ರಂದು ಜರುಗಿದ ಎನ್.ಇ.ಪಿ. 2020ರ ಸ್ಕೀಂನ ಬಿ.ಕಾಂ. ಪ್ರಥಮ ಸೆಮಿಸ್ಟರ್‌ನ Financial Accounting (QP Code 35121, Repeater) ಪರೀಕ್ಷೆಯಲ್ಲಿ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುತ್ತಾರೆ ಎಂದು ವಿದ್ಯಾರ್ಥಿಗಳು ಉಲ್ಲೇಖಿತ (1)ರಲ್ಲಿ ವಿಶ್ವವಿದ್ಯಾನಿಲಯಕ್ಕೆ ದೂರು ಪತ್ರ ಸಲ್ಲಿಸಿರುತ್ತಾರೆ.

ಮೇಲೆ ಪ್ರಸ್ತಾಪಿಸಿರುವ ಕಾಲೇಜಿನಲ್ಲಿ ನಡೆದಿದೆ ಎನ್ನಲಾಗಿರುವ ಪರೀಕ್ಷಾ ಅಕ್ರಮದ ಬಗ್ಗೆ ತನಿಖಾ ಕಾರ್ಯ ನಡೆಸಿ, ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸುವ ಸಂಬಂಧವಾಗಿ ವಿಶ್ವವಿದ್ಯಾನಿಲಯದ ಉಲ್ಲೇಖಿತ (2)ರ ಪತ್ರದಲ್ಲಿ, ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಅದರಂತೆ, ದಿನಾಂಕ:24.04.2025ರಂದು ವಿಶ್ವವಿದ್ಯಾನಿಲಯದ ಪರಿಶೀಲನಾ ಸಮಿತಿಯು ಕಾಲೇಜಿಗೆ ಖುದ್ದು ಭೇಟಿ ನೀಡಿ ಪರೀಕ್ಷಾ ಅಕ್ರಮಾಂಶಗಳ ಮತ್ತು ವಾಸ್ತವಾಂಶಗಳನ್ನು ಪರಿಶೀಲನೆ ನಡೆಸಿ, ಶಿಫಾರಸ್ಸು ಮಾಡಿದ ವರದಿಯನ್ನು ಉಲ್ಲೇಖ(4)ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತದೆ.

ತತ್ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡಿ ಸಲ್ಲಿಸಿರುವ ತನಿಖಾ ವರದಿಯನ್ನು ದಿನಾಂಕ:13.05.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಸೂಕ್ತ ನಿರ್ಣಯಕ್ಕಾಗಿ ಕೋರಿ ಮಂಡಿಸಲಾಗಿದೆ.

### :: ನಿರ್ಣಯ ::

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆಯಲ್ಲಿರುವ ಬಿ.ಪರಮೇಶ್ವರಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಅಕ್ರಮ ನಡೆದಿದ್ದು ಸದರಿ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರಿಶೀಲನಾ ಸಮಿತಿಯು ಪರೀಕ್ಷಾ ಅಕ್ರಮಾಂಶಗಳ ಮತ್ತು ವಾಸ್ತವಾಂಶಗಳನ್ನು ಪರಿಶೀಲನೆ ನಡೆಸಿ, ಶಿಫಾರಸ್ಸು ಮಾಡಿದ ವರದಿಯನ್ನು ಸಭೆಯು ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

**ಅಂಶಗಳು:**

1. ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿದ್ದ ಪ್ರಾಂಶುಪಾಲರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಕಾಲೇಜಿನ ಆಡಳಿತ ಮಂಡಳಿಯವರಿಗೆ ಪತ್ರಿಸುವುದು.
2. ಪರೀಕ್ಷಾ ಕೇಂದ್ರ ರದ್ದುಪಡಿಸಿ, ಹೊಳಲ್ಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಪರೀಕ್ಷಾ ಕೇಂದ್ರವನ್ನಾಗಿ ಜೋಡಣೆ ಮಾಡುವುದು.
3. ಪರೀಕ್ಷಾ ಅಕ್ರಮ ಸಮಿತಿಯಲ್ಲಿ ಈ ಕುರಿತು ಚರ್ಚಿಸಿ ನಿಯಮಾನುಸಾರ ವಿದ್ಯಾರ್ಥಿಗೆ ದಂಡ ವಿಧಿಸುವುದು.
4. ಸದರಿ ವಿದ್ಯಾರ್ಥಿಯ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯುವುದು.
5. ಅಕ್ರಮದಲ್ಲಿ ಭಾಗಿಯಾದ ಪ್ರಾಂಶುಪಾಲರಿಗೆ ನೋಟೀಸ್ ಜಾರಿಗೊಳಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು                ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 27 | |
|---|---|
| ವಿಷಯ ಸಂಖ್ಯೆ: | ಸಿಂ.01(d)/(05/25) |

## –:ಟಿಪ್ಪಣಿ:–

**ವಿಷಯಃ ಡಾ. ಪ್ರಶಾಂತ ಎನ್.ಸಿ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

*****

ಡಾ. ಪ್ರಶಾಂತ ಎನ್. ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:13.05.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

| | |
|---|---|
| ವಿಷಯ–1 | 2026–27ನೇ ಸಾಲಿಗೆ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಬ್ಯಾಚುಲರ್ ಆಫ್ ಸೈನ್ಸ್ ಅಡಿಯಲ್ಲಿ ಡೇಟಾ ಸೈನ್ಸ್ ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು. |
| ನಿರ್ಣಯ : | ಸದರಿ ವಿಷಯವನ್ನು ಮುಂಬರುವ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ಈ ಕುರಿತು ಸರ್ಕಾರಕ್ಕೆ ಪತ್ರಿಸಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು. |
| ವಿಷಯ–2 | ಎಂ.ಬಿ.ಎ. ವಿಭಾಗದಲ್ಲಿ ವಿವಿಧ ಸ್ಪೆಸಲೈಸೇಷನ್ ನೀಡುತ್ತಿದ್ದು ಈಗಿನ ವಿದ್ಯಮಾನಕ್ಕೆ ಅನುಗುಣವಾಗುವಂತೆ ಹೊಸ–ಹೊಸ ಸ್ಪೆಸಲೈಷನ್‌ಗಳಾದ Business Analytics, Digital Marketing & Logistics & supply Chain Management ಪ್ರಾರಂಭಿಸುವ ಕುರಿತು. |
| ನಿರ್ಣಯ : | Business Analytics Specialisation ಪ್ರಾರಂಭಿಸುವ ಕುರಿತು ಅಧ್ಯಯನ ಮಂಡಳಿ (BOS) ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ 02 ಸ್ನಾತಕೋತ್ತರ ಕಾಲೇಜುಗಳಲ್ಲಿ ಸದರಿ Specialisation ಪ್ರಾರಂಭಿಸಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು. |
| ವಿಷಯ–3 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಕುಡಿಯುವ ನೀರಿನ ಕೊರತೆಯಿದ್ದು, ಎಲ್ಲಾ ವಿಭಾಗಗಳಲ್ಲೂ ವಾಟರ್ ಫಿಲ್ಟರ್ ಹಾಕಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವುದು. |
| ನಿರ್ಣಯ : | ಸಮಾಜ ವಿಜ್ಞಾನ ಕಟ್ಟಡದಲ್ಲಿ ರೂ.5.00 ಲಕ್ಷಕ್ಕೆ ಮೀರದಂತೆ 01 ವಾಟರ್ ಫಿಲ್ಟರ್ ಖರೀದಿಸಿ ಅವಳವಡಿಸಲು ನಿರ್ಣಯಿಸಲಾಯಿತು. |

ಕೊನೆಯಲ್ಲಿ ಕುಲಸಚಿವರು (ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು